ಶ್ರೀಮತಿ ಮೋಟಮ್ಮ:- ವಾಟಾಳ್ ನಾಗರಾಜ್‌ರವರೇ, ಅವರು ಅಚ್ಚ ಕನ್ನಡದಲ್ಲಿ ಸ್ವಚ್ಛವಾಗಿ ಮಾತನಾಡಿದರೂ ನಿಮಗೆ ಅರ್ಥವಾಗಲಿಲ್ಲ ಎಂದರೆ ನಿಮ್ಮ ಕನ್ನಡ ಯಾವುದು?

ಶ್ರೀ ವಾಟಾಳ್ ನಾಗರಾಜ್:- ಇವರದ್ದು ಅಚ್ಚ ಕನ್ನಡ ಎಂದರೆ ಆ ದೇವರೇ ಕಾಪಾಡಬೇಕು. ಆ ಭುವನೇಶ್ವರಿಯೇ ಆಕಾಶದಿಂದ ಇಳಿದುಬರಬೇಕಾಗುತ್ತದೆ.

SRI BHIMANNA KANDRE:- With all respect to the Hon'ble leader of the opposition, Hon'ble Deputy leader of the opposition, and the opposition members. I submit that what we done honestly is correct. It was necessary. What we have prescribed, we have declared.

ದಯವಿಟ್ಟು ಇದನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ನೀವು ಮಿಲಿಟರಿ ಸರ್ಕಾರದಲ್ಲಿ ಇರುವುದಕ್ಕೇ ಸರಿ. ಸರ್ವಾಧಿಕಾರಿ ಸರ್ಕಾರದಲ್ಲಿ ಮಂತ್ರಿಯಾಗಿರುವುದಕ್ಕೆ ಸರಿಯೇ ಹೊರತು ಈ ಪ್ರಜ್ರಾಭುತ್ವಕ್ಕೆ ಸರಿಯಿಲ್ಲ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ಈ ಸರ್ಕಾರಕ್ಕೆ ಎಷ್ಟೇ ಒತ್ತಾಯಮಾಡಿದರೂ, ಜನಸಾಮಾನ್ಯರ ಬಗ್ಗೆ, ರೈತರ ಬಗ್ಗೆ ಕಾಳಜಿ ಇಲ್ಲ. ಆದುದರಿಂದ ನಾವು ಇದರ ವಿರುದ್ಧ ಧರಣಿ ಮಾಡಬೇಕಾಗುತ್ತದೆ. ಬೇರೆ ಪ್ರಶ್ನೆಯೇ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾವು ಏನು ಹೇಳಿದರೂ ಅದು ಗೋರ್ಕ್ಲ ಮೇಲೆ ನೀರು ಸುರಿದಂತಾಗಿದೆ, ಏನೂ ಉಪಯೋಗವಿಲ್ಲ.

ಶ್ರೀ ಸಿ. ಬೈರೇಗೌಡ:- ಇದು ಬೆಟ್ಟವನ್ನು ಅಗೆದು ಇಲಿಯನ್ನು ಹಿಡಿದಂತಾಗಿದೆ. ಬೆಟ್ಟ ಅಗೆದು ಇವರು ಕೈಯಲ್ಲಿ ಇಲಿಯನ್ನೂ ಕೂಡ ಹಿಡಿಯುವುದಕ್ಕೆ ಆಗಿಲ್ಲ. ಇದರಲ್ಲಿ ಏನೇನೂ ಅರ್ಥವೇ ಇಲ್ಲ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ದೇಶಪಾಂಡೆ, ಪಿ.ಜಿ.ಆರ್. ಸಿಂಧ್ಯ, ಬಸವರಾಜ ಪಾಟೀಲ್ ಅಟ್ಟೂರು, ಸಿ. ಬೈರೇಗೌಡ, ಕೆ.ಎಸ್. ಈಶ್ವರಪ್ಪ, ಇನ್ನೂ ಮುಂತಾದವರು ಮಾನ್ಯ ಸಭಾಧ್ಯಕ್ಷರ ಮುಂದಿನ ಅವರಣದೊಳಕ್ಕೆ ಆಗಮಿಸಿ ಧರಣಿ ಕುಳಿತರು.)

ಶ್ರೀ ಕೆ.ಎಸ್. ಈಶ್ವರಪ್ಪ:- ಬೇರೆ ರಾಜ್ಯಗಳಲ್ಲಿ ರೇಟು ಜಾಸ್ತಿ ಇದೆ, ಆದುದರಿಂದ ನಾವೂ ಮಾಡುತ್ತೀನೆಂದು ಹೇಳುವುದಾದರೆ ಇದಕ್ಕೆ ಅರ್ಥ ಇದೆಯೇ? ಇದು ಸರ್ಕಾರವೇ?

ಅಧ್ಯಕ್ಷರು:- ಈಗ ಮಾನ್ಯ ಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಓದುತ್ತಾರೆ ಕೇಳಿ. ಶ್ರೀ ಭೀಮಣ್ಣ ಖಂಡ್ರೆ:- ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಇವೇ ಫೆಬ್ರವರಿ ೭ ರಿಂದ .....

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ .....

ಅಧ್ಯಕ್ಷರು:- ದೇಶಪಾಂಡೆಯವರೆ, ಮಾನ್ಯ ಮಂತ್ರಿಗಳು ಇನ್ನೂ ಸ್ಟೇಟ್‌ಮೆಂಟ್‌ನ್ನು ಮಾಡತಕ್ಕದ್ದು ಉಳಿದಿದೆ. ದಯವಿಟ್ಟು ತಮ್ಮ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಿ. ಅದು ಇನ್ನೂ ಪೂರ್ತಿ ಆಗಿಲ್ಲ.